ಪಿ.ಡಬ್ಲ್ಯೂ ಃ **2**

ಸಾಕ್ಷಿಗೆ ದಿನಾಂಕಃ **30.07.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರಃ ಶ್ರೀ ವಕೀಲರ ಮೂಲಕ ಃ

ನಾನು ಈ ದಿನ ನನ್ನ ಮುಖ್ಯ ವಿಚಾರಣಾ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

ನಾನು ಹಾಜರುಪಡಿಸಿರುವ ಕೆಳಕಂಡ ದಾಖಲಾತಿಗಳನ್ನು ಈ ಕೇಸಿನಲ್ಲಿ ನಿಶಾನೆಗಳನ್ನಾಗಿ ಗುರುತಿಸಿಕೊಳ್ಳಬೇಕೆಂದು ಕೋರುತ್ತೇನೆ.

ಕೇಸ್ ಶೀಟ್‌ನ್ನು ನಿಪಿ **12** ಎಂದು, **05** ಕ್ಷ ಕಿರಣಗಳನ್ನು ಒಟ್ಟಾಗಿ ನಿಪಿ **13** ಎಂದು, **02** ಇತ್ತೀಚಿನ ಕ್ಷ ಕಿರಣಗಳನ್ನು ಒಟ್ಟಾಗಿ ನಿಪಿ **14** ಎಂದು, ಹೊರರೋಗಿ ವಿಭಾಗದ ಇತ್ತೀಚಿನ ದಾಖಲೆಯನ್ನು ನಿಪಿ **15** ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಎದುರುದಾರರ ಪರಃ ಶ್ರೀ ವಕೀಲರ ಮೂಲಕ ಃ

ನಾನು ಮೊದಲು ಅರ್ಜಿದಾರರನ್ನು ಮೈಸೂರಿನ ಸ್ಪಂದನಾ ಆಸ್ಪತ್ರೆಯಲ್ಲಿ ನೋಡಿರುತ್ತೇನೆ. ಅದಕ್ಕಿಂತ ಪೂರ್ವದಲ್ಲಿ ಮಳವಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದಿರುತ್ತಾರೆ. ನಾನು ಮಳವಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಸ್ಪಂದನಾ ಆಸ್ಪತ್ರೆಯಲ್ಲಿ ಅಥಿತಿ ವೈದ್ಯನಾಗಿ ಹೋಗುತ್ತಿರುತ್ತೇನೆ. ಅರ್ಜಿದಾರರು ಮೈಸೂರಿನ ಆಸ್ಪತ್ರೆಗೆ ಮದ್ಯಾಹ್ನ **3-07** ನಿಮಿಷಕ್ಕೆ ಬಂದಿರುತ್ತಾರೆ. ಸ್ಪಂದಾನಾ ಆಸ್ಪತ್ರೆಯಲ್ಲಿ ಗಾಯಾಳು ಬಂದಾಗ ತನಗೆ ರೂಫಿಂಗ್ ಶೀಟ್ ಬೈಕ್‌ನ ಮೇಲೆ ಬಿದ್ದು, ಗಾಯವಾಗಿದೆ ಎಂದು ಬರೆಸಿರುತ್ತಾರೆ. ಡಾ. ಚೈತ್ರಾ ಎಂಬುವವರು ಸಹ ಅರ್ಜಿದಾರರಿಗೆ ಚಿಕಿತ್ಸೆ ನೀಡಿರುತ್ತಾರೆ. ಬೆರಳಿಗೆ ಶಸ್ತ್ರಚಿಕಿತ್ಸೆ ಮಾಡಿ ವೈರ್‌ನ್ನು ಅಳವಡಿಸಿರುತ್ತೇವೆ. ಅದು ಬಲಕಾಲಿನ ಹೆಬ್ಬೆಟ್ಟು ಆಗಿರುತ್ತದೆ.

**2.** ಅರ್ಜಿದಾರರಿಗೆ ಮೇಲೆ ಹೇಳಿದ ಪೆಟ್ಟಿನಿಂದ ಅವರ ದಿನನಿತ್ಯದ ಕಾರ್ಯಕ್ಕೆ ತೊಂದರೆ ಇಲ್ಲ ಎಂದರೆ ಸ್ವಲ್ಪ ತೊಂದರೆ ಇರುತ್ತದೆ. ಅರ್ಜಿದಾರರಿಗೆ ಸಾಮಾನ್ಯ ಸ್ವರೂಪದ ಗಾಯವಾಗಿದ್ದೂ ಆದರೂ ಸಹ ಶಸ್ತ್ರಚಿಕಿತ್ಸೆ ಮಾಡಿ ವೈರ್‌ನ್ನು ಅಳವಡಿಸಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಶಸ್ತ್ರಚಿಕಿತ್ಸೆ ಮಾಡಿದ ಬಗ್ಗೆ ನಿಪಿ **12** ರಲ್ಲಿ ನಮೂದು ಮಾಡಿರುತ್ತೇವೆ. ಸದರಿ ದಾಖಲೆಯಲ್ಲಿ ಅರ್ಜಿದಾರರು ಮಳವಳ್ಳಿಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಸಹ ನಮೂದು ಮಾಡಿರುತ್ತೇವೆ. ಕ್ಷ ಕಿರಣದ ವರದಿಯನ್ನು ನಿಪಿ **12** ರಲ್ಲಿ ನಮೂದು ಮಾಡಿಲ್ಲ

ಎಂದರೆ ಸರಿ. ನಿಪಿ **14** ರ ವರದಿಯನ್ನೂ ಸಹ ನಿಪಿ **12** ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ವರದಿಯಲ್ಲಿ ಅರ್ಜಿದಾರರಿಗೆ ಏನೇನು ನ್ಯೂನ್ಯತೆ ಇದೆ ಎಂದು ಸ್ಪಷ್ಟವಾಗಿ ಕಂಡು ಬರುತ್ತದೆ ಎಂದರೆ ಸರಿ. ಅರ್ಜಿದಾರರಿಗೆ ಯಾವುದೇ ನ್ಯೂನ್ಯತೆ ಇಲ್ಲದ ಕಾರಣ ಅದು ಗೊತ್ತಾಗುತ್ತದೆ ಎಂದು ನಿಪಿ **12** ರಲ್ಲಿ ವರದಿಯನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

**3.** ನನಗೆ ಅರ್ಜಿದಾರರಿಗೆ ಅಂಗನ್ಯೂನ್ಯತೆ ಪತ್ರವನ್ನು ನೀಡಿಲ್ಲ ಎಂದರೆ ಸರಿ. ಆ ರೀತಿ ನೀಡಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ಸ್ಪಂದನಾ ಆಸ್ಪತ್ರೆಯಲ್ಲಿ ಬೇರೆ ಮೂಳೆ ತಜ್ಞರು ಇದ್ದು, ನಾನು ಅರ್ಜಿದಾರರಿಗೆ ಚಿಕಿತ್ಸೆ ನೀಡಿಲ್ಲ ಎಂದರೆ ಸರಿಯಲ್ಲ. ಕಾಲಿನ ಹೆಬ್ಬೆಟ್ಟಿಗೆ ಪೆಟ್ಟಾದರೆ ನ್ಯೂನ್ಯತೆ ಇರುವುದಿಲ್ಲವೆಂದು **2018** ರ ಕೇಂದ್ರ ಸರ್ಕಾರದ ನೋಟಿಫಿಕೇಶನ್‌ನಲ್ಲಿ ಇದೆ ಎಂದರೆ ಸರಿ. ನಿಪಿ **13** ಮತ್ತು **14** ಕ್ಷಾ ಕಿರಣಗಳನ್ನು ಸ್ಪಂದನಾ ಆಸ್ಪತ್ರೆಯಲ್ಲಿ ತೆಗೆಸಲಾಗಿದೆ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ಅರ್ಜಿದಾರರಿಗೆ ಯಾವುದೇ ನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಅನುಕೂಲವಾಗಲಿ ಎಂದು ನಾನು ಶೇಕಡ **25** ರ ನ್ಯೂನ್ಯತೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರು ಗುಣಮುಖರಾಗಿರುತ್ತಾರೆ ಎಂದರೆ ಸರಿ. ಆ ರೀತಿ ಅರ್ಜಿದಾರರು ಗುಣಮುಖರಾಗಿದ್ದರೂ ಸಹ ಅವರಿಗೆ ಪರಿಹಾರ ಬರಲಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಎಂ.ಎ.ಸಿ.ಟಿ. ಮಳವಳ್ಳಿ.